ಅಲ್ಲ, ಅಷ್ಟೆಲ್ಲ ಶ್ರೀಮಂತರಾಗಿದ್ದರೂ ಮಗಳಿಗೆ ಯಾಕೆ ಸರೀ ಟೈಮಿಗೆ ಮದುವೆ ಮಾಡ್ಲಿಕ್ಕೆ ಅವರಿಗೆ ಆಗ್ಲಿಲ್ಲ? ಯಂತಕ್ಕೆ ಮೂರು ನಾಕು ಸಂಬಂಧಗಳು ಹತ್ರ ಹತ್ರ ಬಂದು ಮದುವೆ ತಪ್ಪಿಹೋಯ್ತು? ಯಾರಾದ್ರೂ ಸಮಾ ಗೊತ್ತಿದ್ದವ್ರ ಹತ್ರ ಕೇಳಿಸು. ಮದುವೆ ಆಗುವವ ನೀನು. ನಾಳೆ ದಿವಸ ಮನೆ ಅಳಿಯನನ್ನಾಗಿ ಮಾಡಿಕೊಂಡು ನಿನ್ನನ್ನು ಹಿಡಿತದಲ್ಲಿ ಇಟ್ಟುಕೊಳ್ಳುವ ಆಲೋಚನೆಯೋ? ಗೊತ್ತಿಲ್ಲ. ನೋಡು ಸರೀ ವಿಚಾರಿಸು. ಆ ಹುಡುಗಿಯ ಹತ್ರ ಮಾತಾಡು. ಆಮೇಲೆ ನಿನ್ನ ನಿರ್ಧಾರಕ್ಕೆ ಬಿಟ್ಟದ್ದು' ಅಂತ ಹೇಳಿದ್ರು.

ರಾಜೇಶ ಸ್ಮಿತಾಳ ಬಗ್ಗೆ ಕೆಲವು ಕಡೆ ಕೇಳಿಸಿ ನೋಡಿದ. ಎಲ್ರೂ ಆ ಹುಡುಗಿಯ ಬಗ್ಗೆ ಒಳ್ಳೆಯ ಮಾತುಗಳನ್ನೇ ಆಡಿದ್ರು. ಒಂದು ಸರ್ತಿ ಅವಳನ್ನು ಹೋಟೆಲ್ ಒಂದರಲ್ಲಿ ಭೇಟಿ ಮಾಡಿ ಮಾತಾಡಿದ. ಅವಳು 'ನನ್ನ ಅಪ್ಪ ನನ್ನನ್ನು ತುಂಬ ಸ್ಟ್ರಿಕ್ಟಾಗಿ ಬೆಳೆಸಿದ್ದಾರೆ. ಅವರು ಹೇಳಿದ್ದೇ ಫೈನಲ್. ಅಮ್ಮ ಹೋದ ಮೇಲೆ ಅಂತೂ ನನ್ನ ಬಗ್ಗೆ ತುಂಬ ಪೊಸೆಸ್ಸಿವ್ ಆಗಿದ್ದಾರೆ. ಎದ್ದಾಗ ಕೂತಾಗ ಗಾಬರಿಯಾಗಿ ನನ್ನ ಹತ್ರ ಮಾತಾಡ್ತಾರೆ. ಅವರ ಮನಸ್ಸಿಗೆ ನೀವು ಓಕೆ ಆಗಿದ್ದೀರಿ ಅಂದ್ರೆ ನಂಗೆ ಸಾ ಓಕೆ. ಉಳಿದಂತೆ ನಿಮ್ಮ ಡಿಸಿಷನ್ ಹೇಗೋ ನಂಗೆ ಗೊತ್ತಿಲ್ಲ' ಅಂತ ಸಣ್ಣ ಮಕ್ಕಳಂತೆ ಹೇಳಿದಾಗ ರಾಜೇಶ ಕ್ಲೀನ್ ಬೌಲ್ಡಾಗಿದ್ದ. ದಂತದ ಗೊಂಬೆ. ಮುಗ್ಧೆ. ಯಾರಿಗೂ ನೋವು ಉಂಟಾಗುವಂತೆ ಮಾತಾಡುವವಳಲ್ಲ. ಇವಳನ್ನು ಮದುವೆ ಆದರೆ ಜೀವನ ಪಾವನ ಆಗುತ್ತದೆ ಅಂತ ಅವ ಎಣಿಸಿದ.



ನೋಡ್ತಾ ನೋಡ್ತಾ ಇದ್ದ ಹಾಗೆ ಎಂಗೇಜ್‌ಮೆಂಟ್ ಆಗಿಯೇ ಹೋಯಿತು. ಅದಾಗಿ ನಾಕು ತಿಂಗಳಿಗೆ ಮದುವೆ ಅಂತ ನಿರ್ಧಾರ ಆಗಿತ್ತು. ಡೈಲಿ ಸಂಜೆ ಅವಳಿಂದ ಕಾಲ್ ಬರೂದು, ರಾಜೇಶ ಚಡಪಡಿಸಿಕೊಂಡು ಆಫೀಸಿನಿಂದ ಹೊರಡುವುದು ಆಗ್ತಿತ್ತು. ಈ ಕಥೆಯ ಪ್ರಾರಂಭದಲ್ಲಿ ಗೆಳೆಯರು ಕಿಚಾಯಿಸಿದ ಮಾತುಗಳನ್ನು ಹೇಳಿದೆನಲ್ವಾ? ಅದೇ ಅವತ್ತು ಸಂಜೆ ಸ್ಮಿತಾಳಿಂದ ಕಾಲ್ ಬಂದು ರಾಜೇಶ ಹೊರಟಾಗ ಸಹೋದ್ಯೋಗಿಗಳು ಹೇಳಿದ್ದು.

'ರಾಜೇಶ... ಇವತ್ತು ಸಂಜೆ ಲೇಕಿಗೆ ಕರ್ಕೊಂಡು ಹೋಗೋ' ಅಂತ ಅವಳು ಫೋನ್ ಮಾಡಿದ್ದಳು. ಹೇಳಿದ ಟೈಮಿಗೆ ಸರಿಯಾಗಿ ಬಂದಿದ್ದ. ಕೇಳಿದ ಐಸ್ ಕ್ರೀಂ, ಪಾಪ್ ಕಾರ್ನ್ ಅದು ಇದು ಎಲ್ಲ ತಿಂದು ಆದ ಮೇಲೆ, 'ಬೋಟಿಂಗ್ ಮಾಡುವಾ' ಅಂದಳು. ಇವನೂ ಹೂಂ ಅಂದ. ಇಬ್ರೂ ಪೆಡಲ್ ಮಾಡ್ತಾ ಲೇಕ್ ಸುತ್ತಿದರು.

'ನಾವು ಎಂಥ ದಡ್ಡರು ನೋಡು. ಬೋಟ್ ಹತ್ತಿದೆವು. ಲೈಫ್ ಜಾಕೆಟ್ ಹಾಕೊಳ್ಳೇ ಇಲ್ಲ. ಎಲ್ಲಾದ್ರೂ ಸಡನ್ನಾಗಿ ಏನಾದ್ರೂ ಆದ್ರೆ ಏನು ಗತಿ?' ಸ್ಮಿತಾ ಒಂಥರಾ ಹೆದರಿಕೆಯಿಂದ ಕೇಳಿದಳು.

'ಅಯ್ಯೋ... ಪುಕ್ಲಿ, ಐ ನೋ ಸ್ವಿಮ್ಮಿಂಗ್. ಡೋಂಟ್ ವರಿ. ನೀನು ಬಿದ್ರೂ ಎತ್ತಿಕೊಂಡು ಬರ್ತೇನೆ'.

'ಓಹ್... ಹೌದಾ... ನಿಂಗೆ ಈಜ್ಲಿಕ್ಕೆ ಬರ್ತದಾ? ನಂಗೆ ಗೊತ್ತೇ ಇರ್ಲಿಲ್ಲ. ಈಗ ಧೈರ್ಯ ಬಂತು' ಅಂತ ಹೇಳಿದಳು.

ಮತ್ತೂ ಒಂದು ಸುತ್ತು ಲೇಕಿನಲ್ಲಿ ಬೋಟಿಂಗ್ ಮಾಡಿ ದಡಕ್ಕೆ ಬಂದರು, 'ರಾಜೇಶಾ... ನಂದು ಒಂದು ಆಸೆ ಉಂಟು. ನಮ್ಮ ಮದುವೆಗೆ ಇನ್ನು ಹದಿನೈದು ದಿನ ಅಷ್ಟೇ ಇರೂದು. ಎಲ್ರೂ ಹಿಲ್ ಟಾಪ್ ಎಂಡ್ ಪಾಯಿಂಟ್‌ನಲ್ಲಿ ಪ್ರೀವೆಡ್ಡಿಂಗ್ ಫೋಟೊ ಶೂಟ್ ಮಾಡಿಸಿಕೊಳ್ತಾರೆ. ನಾವು ಸಾ ಮಾಡಿಸುವಾ, ಪ್ಲೀಸ್' ಅಂತ ಎದೆಗೆ ಒರಗಿ ಕೇಳಿದಳು.

'ಏನು...? ಪ್ರೀ ವೆಡ್ಡಿಂಗ್ ಫೋಟೊ ಶೂಟ್ ಹಿಲ್ ಟಾಪ್ ಎಂಡ್ ಪಾಯಿಂಟಿನಲ್ಲಿಯಾ?' ಗಾಬರಿಯಿಂದ ಕೇಳಿದ.

'ಹೌದು... ಯಾಕೆ ಅಷ್ಟು ಗಾಬರಿ ಆಗ್ತೀ? ಎಲ್ರೂ ಅಲ್ಲೇ ಮಾಡಿಸ್ತಾರೆ.'

'ಬೇರೆ ಎಂತಕ್ಕೂ ಅಲ್ಲ. ನಂಗೆ ಎತ್ತರದಿಂದ ಕೆಳಗೆ ನೋಡಿದ್ರೆ ಒಂದು ನಮೂನಿ ಹೆದರಿಕೆ ಆಗ್ತದೆ. ಚಿಕ್ಕ ಇದ್ದಾಗಿನಿಂದ ಸಾ ಹಾಗೆಯೇ. ಹಾಗಾಗಿ ನಾನು ಎತ್ತರದ ಜಾಗಗಳಿಗೆ ಹೋಗುದೇ ಇಲ್ಲ. ಹೋದ್ರೂ ಬಗ್ಗಿ ನೋಡುದೇ ಇಲ್ಲ.'

'ಪ್ಲೀಸ್ ಪ್ಲೀಸ್ ಪ್ಲೀಸ್, ಇಲ್ಲಾಂತ ಮಾತ್ರ ಹೇಳ್ಬೇಡ. ನಾನು ಇದ್ದೇನಲ್ವಾ, ನಿಂಗೆ ಎಂತಕ್ಕೆ ಹೆದ್ರಿಕೆ?' ಅಂತ ಸಣ್ಣ ಮಕ್ಕಳ ಹಾಗೆ ಅಂಗಲಾಚುವ ದನಿಯಲ್ಲಿ ಆಕೆ ಕೇಳುವಾಗ ಅವನ ಬಾಯಿ ಕಟ್ಟಿತು. ಕಡೆಗೆ ಹೂಂ ಅಂದ. ತನ್ನ ಜೊತೆಗೆ ಹೊರಗೆ ಹೋಗುವಾಗಲೆಲ್ಲ ಅವಳು ಸಣ್ಣ ಸಣ್ಣ ವಿಷಯಗಳ ಬಗ್ಗೆ ಕುತೂಹಲ ತೋರಿಸುವಾಗ, ಸಣ್ಣ ಸಣ್ಣ ಸಂಗತಿಗಳನ್ನು ಸಂಭ್ರಮಿಸುವಾಗ ಅವನಿಗೆ ಅವಳ ಬಗ್ಗೆ ಅಯ್ಯೋ ಪಾಪ ಅಂತ ಅನಿಸ್ತಾ ಇರ್ತಿತ್ತು.

ಅವರಿಬ್ಬರೂ ದಡಕ್ಕೆ ಬೋಟ್ ತಂದರು. ಇನ್ನೇನು ಮನೆಯ ಕಡೆ ಹೊರಡಬೇಕು ಅನ್ನುವಷ್ಟರಲ್ಲಿ, 'ಸ್ವಲ್ಪ ನನ್ನ ಮೊಬೈಲ್, ವ್ಯಾಲೆಟ್ ಹಿಡ್ಕೋ. ನಾನು ವಾಷ್ ರೂಮಿಗೆ ಹೋಗಿ ಬರ್ತೇನೆ' ಅಂದು, ಅವಳು ವಾಷ್ ರೂಂ ಕಡೆಗೆ ಹೋದಳು. ಸ್ವಲ್ಪ ಹೊತ್ತಿಗೆ ಅವಳ ಮೊಬೈಲಿಗೆ ಒಂದು ಕಾಲ್ ಬಂತು. ರಾಜೇಶ ನೋಡಿದ. 'ಕಾಲಿಂಗ್ ಫ್ರಂ ಸ್ವೀಟ್ ಹಾರ್ಟ್' ಅಂತ ಸ್ಕ್ರೀನಿನ ಮೇಲೆ ಬಂತು! ಕುತೂಹಲದಿಂದ ಆತ ಕಾಲ್ ರಿಸೀವ್ ಮಾಡಿ ಕಿವಿಗೆ ಇಟ್ಟುಕೊಂಡ. ಹಲೋ ಅಂತ ಹೇಳಿರಲಿಲ್ಲ. ಆ ಕಡೆಯಿಂದ ಪಿಸುದನಿಯಲ್ಲಿ 'ಏನಂತ ಹೇಳಿದ ನಿನ್ನ ಭಾವೀ ಪತಿ? ಹಿಲ್ ಟಾಪಿನ ಎಂಡ್ ಪಾಯಿಂಟಿನಲ್ಲಿ ಫೋಟೊ ಶೂಟ್ ಮಾಡ್ಲಿಕ್ಕೆ ಒಪ್ಪಿದ್ನಾ? ನಾನು ಹೇಳಿದ್ದು ಎಲ್ಲ ಗೊತ್ತುಂಟಲ್ವಾ... ಎಲ್ಲ ಪಕ್ಕಾ ಪ್ಲ್ಯಾನಿನಂತೆಯೇ ನಡೀಬೇಕು. ಎಂಡಿಗೆ ಕರ್ಕೊಂಡು ಹೋಗು. ಟೈಂ ನೋಡಿ ಫೋಟೊ ತೆಗೆಯುವ ನೆಪದಲ್ಲಿ ಕೆಳಗೆ ತಳ್ಳಿಬಿಡು. ನಾನು ಕಾರ್ ತೆಕ್ಕೊಂಡು ಅಲ್ಲಿಗೆ ಬಂದು ಇರ್ತೇನೆ. ಕೂಡ್ಲೆ ಎಸ್ಕೇಪ್ ಆಗುವ. ಇಷ್ಟು ವರ್ಷ ನಿಂಗಾಗಿ ಕಾದು ಕಾದು, ಫಿಕ್ಸ್ ಆದ ಹುಡುಗರನ್ನು ತಪ್ಪಿಸಿ ನಂಗೆ ಸಾಕಾಗಿ ಹೋಯ್ತು. ಇನ್ನು ಕಾಯ್ಲಿಕ್ಕೆ ಆಗೂದಿಲ್ಲ!' ಅಂತ ಒಂದೇ ಉಸಿರಿಗೆ ಆ ವ್ಯಕ್ತಿ ಮಾತಾಡ್ತಾ ಇದ್ದ.

ರಾಜೇಶ ಕೇಳ್ತಾ ಇದ್ದ ಹಾಗೆ ಹೆದ್ರಿ ಹೋದ. ಅಂದ್ರೆ? ಇವಳದ್ದು ಎಲ್ಲವೂ ನಾಟಕ! ಅಬ್ಬಾ ಇವಳ ಸಂಚೇ...! ಅಂತ ಯೋಚನೆ ಮಾಡಿದವನೇ ಅವಳ ಪರ್ಸ್, ಮೊಬೈಲು ಎಲ್ಲ ಬಿಸಾಡಿದವನೇ ಒಂದೇ ಸಮನೆ ಓಡಿದ. ಮನೆಗೆ ಬಂದವನೇ ತಾನು ಕಂಪನಿ ಬಿಡುವ ನಿರ್ಧಾರ ಮಾಡಿದ್ದನ್ನು ಬಾಸಿಗೆ ಇಮೇಲ್ ಮಾಡಿದ.

ತಾಯಿಗೆ ಫೋನ್ ಮಾಡಿ, 'ಯಾಕೆ ಏನು ಅಂತ ಕೇಳಬೇಡ. ನನ್ನ–ಸ್ಮಿತಾಳ ಮದುವೆ ಕ್ಯಾನ್ಸಲ್ ಆಗಿದೆ. ನಾನು ಊರಿಗೆ ವಾಪಾಸ್ ಬರ್ತೇನೆ. ಸ್ವಲ್ಪದಿನ ನಿನ್ನೊಟ್ಟಿಗೆ ಇರ್ತೇನೆ. ನೀನು ಅದೆಲ್ಲಿಗೋ ಎಲ್ಲ ಹೋಗ್ಬೇಕು ಅಂತ ಹೇಳ್ತಾ ಇರ್ತಾ ಇದ್ದಿ ಅಲ್ವಾ? ಅಲ್ಲಿಗೆಲ್ಲ ಹೋಗುವಾ' ಅಂತ ಹೇಳಿ ಫೋನ್ ಇಟ್ಟ. ಒಂದೆರಡು ಗ್ಲಾಸ್ ನೀರು ಕುಡಿದು ನಿರಾಳವಾಗಿ ಉಸಿರಾಡಿದ.

ಪ್ರತಿಕ್ರಿಯಿಸಿ: **feedback@sudha.co.in**